# ದೇವರೆಂಬ ಮಹಾವೃತ್ತ

ದೇವರೆಂದರೇನು? ದೇವರು ಇದ್ದಾನೆಯೋ, ಇಲ್ಲವೋ?– ಇಂಥ ಪ್ರಶ್ನೆಗಳನ್ನು ಮಾನವಕುಲ ಯುಗ ಯುಗಗಳಿಂದ ಕೇಳುತ್ತಲೇ ಬಂದಿದೆ. ದೇವರು ಎಂಬುದೊಂದು ಚಿರಜಿಜ್ಞಾಸೆಯ ವಿಷಯ. ಜಿಜ್ಞಾಸುಗಳೂ, ಶ್ರದ್ಧಾಳುಗಳೂ ಇಂಥ ಪ್ರಶ್ನೆಗಳಿಗೆ ತಮ್ಮದೇ ಆದ ಉತ್ತರಗಳನ್ನು ಕಂಡುಕೊಂಡಿದ್ದಾರೆ. ಕೆಲವರು ದೇವರೆಂದರೇನೆಂದು ನಮಗೆ ತಿಳಿಯದು ಎಂದು ಹೇಳಿದರೆ, ಇನ್ನು ಕೆಲವರು ದೇವರೆಂದರೆ ನಮ್ಮ ಕಲ್ಪನೆಯ ಕೂಸು ಎಂದಾರು. ಸರಳರೂ ಭಾವುಕರೂ ಆದವರು ದೇವರ ಇರುವಿಕೆಯನ್ನು ಕುರಿತು ಪ್ರಶ್ನಿಸುವುದೇ ಇಲ್ಲ. ಪಾರಂಪರಿಕವಾಗಿ ಬಂದಿರುವ ನಂಬಿಕೆಯನ್ನು ಅವರು ತಮ್ಮ ಎದೆಯ ಗುಡಿಯಲ್ಲಿಟ್ಟುಕೊಂಡು, ನೆಮ್ಮದಿಯನ್ನು ಪಡೆಯಲು ಪ್ರಯತ್ನಿಸುತ್ತಾರೆ. ವೇದಾಂತಿಗಳ ಪಾಲಿಗೆ ಭಗವಂತನೆಂದರೆ ಅವ್ಯಕ್ತ, ಅಪ್ರಮೇಯ, ಅಗಮ್ಯ, ಅವಾಙ್ಮಾನಸ ಗೋಚರ– ಇತ್ಯಾದಿ ಅಮೂರ್ತಭಾವಗಳಿಂದ ಕೂಡಿದ ಒಂದು ಮಹಾಪ್ರಜ್ಞೆ. ಆದ್ದರಿಂದಲೇ ಕೆಲವರಿಗೆ ಭಗವಂತ ಸಗುಣ, ಸಾಕಾರ ನೆಂದೆನ್ನಿಸಿದರೆ, ಇನ್ನು ಕೆಲವರಿಗೆ ಆತ ನಿರ್ಗುಣ, ನಿರಾಕಾರ. 'ಭಯವೇ ಭಗವಂತನ ಮೂಲ' ಎಂದು ಹೇಳುವವರೂ ಇದ್ದಾರೆ. ತಾವೇ ಸ್ವತಃ ದೇವರ ಅಸ್ತಿತ್ವವನ್ನು ಅನುಭವಿಸಿ, ಶ್ರದ್ಧಾಳುಗಳು, ಜಿಜ್ಞಾಸುಗಳು– ಇಬ್ಬರನ್ನೂ ತಮ್ಮ ಅನುಭವದ ಬೆಳಕಿನಲ್ಲಿ ನಡೆಸಲು ಸಮರ್ಥರಾದ ಯೋಗಿಗಳೂ, ಅನುಭಾವಿಗಳೂ ಅಲ್ಲಲ್ಲಿ ಕಾಣಸಿಗುತ್ತಾರೆ.



ಇಷ್ಟಾದರೂ ದೇವರನ್ನು ಕುರಿತು ಸರ್ವಸಮ್ಮತವೂ, ಸಾರ್ವಕಾಲಿಕವೂ ಆದ ವಿವರಣೆ, ವ್ಯಾಖ್ಯಾನ ವಿದೆಯೆಂದು ಹೇಳಲಾಗದು, ಮನುಷ್ಯನು ತನ್ನ ಪಾಲಿಗೆ ಬರುವ ದೈಹಿಕ ಮಾನಸಿಕ ಕಷ್ಟಗಳಿಗೆ ದೇವರ ಅಸ್ತಿತ್ವದಲ್ಲಿ ಪರಿಹಾರ ಕಂಡುಕೊಳ್ಳಲು ಪ್ರಯತ್ನಿಸುವುದಂತೂ ಸತ್ಯ. ಹೀಗಾಗಿ ದೇವರು ಮನುಷ್ಯನಿಗೆ ಒಂದು 'ಆಲಂಬನ'ವಾಗಿ ಒದಗಿ ಬರುತ್ತಾನೆ. ದೇವರಿಲ್ಲ ಎಂದು ವಾದಿಸುವವರನ್ನು ಕುರಿತು ಕವಿ ಪು.ತಿ.ನ. –ಸ್ವಲ್ಪ ಲಘುದಾಟಿಯಲ್ಲಿ, ಆದರೆ ಅರ್ಥಪೂರ್ಣವಾಗಿ– ಹೇಳಿದ ಮಾತುಗಳು ನೆನಪಾಗುತ್ತವೆ. 'ದೇವರಿಲ್ಲ ಎನ್ನುವುದು ನನಗೂ ಗೊತ್ತಪ್ಪಾ. ನಮಗೆ ಬೇಕಿದ್ದರೆ ನಾವು ಮಾಡಿಕೋಬೇಕು. ಮನೆಯಲ್ಲಿ ಕಾಫಿ ಇರುತ್ತದೆಯೇ? ಇಡ್ಲಿ ಇರುತ್ತದೆಯೇ? ಬೇಕು ಎಂದರೆ ನಾವು ಮಾಡಿಕೊಳ್ಳುತ್ತೇವೆ. ಮಾಡಿಕೊಂಡಮೇಲೆ ಅದು ಇರುತ್ತೆ.' ನಮ್ಮ ನಮ್ಮ ದೇವರನ್ನು ನಾವು ನಾವೇ 'ಮಾಡಿಕೊಳ್ಳುವುದು' ಅಗತ್ಯ ಎನ್ನುವ ಪು.ತಿ.ನ.ರವರ ಅಭಿಪ್ರಾಯದೊಂದಿಗೆ "If God did not exist it would be necessary to invent him" ಎಂಬ ವಾಲ್ಟೇರ್‌ನ ಅಭಿಪ್ರಾಯವನ್ನು ಹೊಂದಿಸಿಕೊಳ್ಳಬಹುದಲ್ಲವೆ?

ಗ್ರೀಕ್ ಚಿಂತಕನೊಬ್ಬ ದೇವರನ್ನು ಒಂದು ಮಹಾವೃತ್ತವೆಂದು ಪರಿಭಾವಿಸಿದ್ದಾನೆ. ದೇವರೆನ್ನುವ ವೃತ್ತದ ಕೇಂದ್ರ ಬಿಂದು ವಿಶ್ವದ ಎಲ್ಲ ಕಡೆಯಲ್ಲೂ ಇದೆ, ಆದರೆ ಆ ವೃತ್ತದ ಪರಿಧಿ ಮಾತ್ರ ವಿಶ್ವದ ಗಡಿ ಮೀರಿ ಎಲ್ಲೋ ಇರುವಂಥದು ಎನ್ನುತ್ತಾನೆ ಆತ, ಭಗವಂತ ಅಣುವಿನಲ್ಲಿ ಅಣು, ಮಹತ್ತಿನಲ್ಲಿ ಮಹತ್ತು ಎಂಬ ಭಾರತೀಯ ದರ್ಶನವೂ ಇದೇ ಭಾವದಿಂದ ಕೂಡಿರುವಂಥದು. ಭಗವಂತ ಇಡಿಯ ವಿಶ್ವದ ಕಣ ಕಣಗಳನ್ನು ಆವರಿಸಿ, ಅದರಾಚೆಗೂ ಚಾಚಿಕೊಂಡಿದ್ದಾನೆ ಎನ್ನುವ ಭಾವ ಭಾರತೀಯರಿಗೆ ಹೊಸತಲ್ಲ. ಈ ಸಂದರ್ಭದಲ್ಲಿ ಎನ್.ಎಸ್. ಲಕ್ಷ್ಮೀನಾರಾಯಣ ಭಟ್ಟರ 'ದೇವರೆಂದರೇನು ಅಜ್ಜ' ಎಂಬ ಒಂದು ಕವಿತೆಯನ್ನು ಪ್ರಸ್ತಾಪಿಸಬೇಕೆನ್ನಿಸುತ್ತದೆ. ಒಂದು ಮಗು– 'ದೇವರೆಂದರೇನು ಅಜ್ಜ?' ಎಂದು ಅಜ್ಜನನ್ನು ಕೇಳುತ್ತದೆ. ಅಜ್ಜ ದೇವರನ್ನು ಕುರಿತು ವಿವರಿಸುತ್ತಾ, ಕೊನೆಯಲ್ಲಿ ಹೀಗೆ ಹೇಳುತ್ತಾನೆ: ದೇವರು ಎಂದರೆ–

"ಮುಗಿಲರೆಕ್ಕೆ ಮಡಚಿ ಕೂತ ಕಾಲವೆಂಬ ಹಕ್ಕಿ
ಗ್ರಹತಾರೆಗಳದಕೆ ತಿನ್ನಲೆರಚಿದಂಥ ಅಕ್ಕಿ
ಮೈ ತುದಿಗಳೆ ಕಾಣದಂಥ ಮಹದಾಕೃತಿ ಅದು
ಅಣುವಿನೆದುರ ಬೆಟ್ಟದಂತೆ ನಮ್ಮೆದುರಲಿ ಅದು
ಹೀಗಿದ್ದೂ ಅದು ಸಣ್ಣನೆ ಕಣಕೂ ಕಿರಿದಂತೆ
ಕೇಳುವ ನಮ್ಮೊಳಗಿನೊಳಗೆ ಅಣುವಾಗಿದೆಯಂತೆ!"

–ಇದು ಭಾರತೀಯ ಮನಸ್ಸು ಕಲ್ಪಿಸಿಕೊಂಡಿರುವ ದೇವರು!

■ ವೈನತೇಯ

# ಮಾತೇ ಮುತ್ತು

★ ಸ್ನೇಹಿತರ ಬಳಿಗೆ ಸಲಹೆಗೆ ಹೋಗು, ಕನಿಕರ ಬೇಕಾದರೆ ಹೆಂಗಸರ ಬಳಿ ಹೋಗು, ದಾನ ಬೇಕಾದರೆ ಅಪರಿಚಿತರ ಬಳಿ ಹೋಗು; ಏನನ್ನೂ ಕೇಳದೆ ಇರಲು ಬಂಧುಗಳ ಬಳಿ ಹೋಗು.

–ಸ್ಪ್ಯಾನಿಷ್ ಗಾದೆ

★ ಬೆಚ್ಚಗಿರಲು ಸಹಾಯ ಮಾಡುವ ಸಣ್ಣ ಬೆಂಕಿ, ಸುಡುವ ದೊಡ್ಡ ಬೆಂಕಿಗಿಂತ ಉತ್ತಮ.

–ಐರಿಶ್ ಗಾದೆ

★ ಅಣ್ಣ– ತಮ್ಮಂದಿರಂತೆ ಒಟ್ಟಿಗೆ ಬಾಳಿರಿ; ಅಪರಿಚಿತರಂತೆ ವ್ಯವಹಾರ ಮಾಡಿರಿ.

–ಅರಬ್ ಗಾದೆ

★ ಜನಸಂಖ್ಯೆಯ ಅರ್ಧಭಾಗವಾದ ಮಹಿಳೆಯನ್ನು ಆಡಳಿತದಿಂದ ಹೊರಗಿಡಲು ಸಾಧ್ಯವಿಲ್ಲ.

–ಸರ್ದಾರ್ ವಲ್ಲಭಭಾಯಿ ಪಟೇಲ್

★ ಇರುವುದೆಲ್ಲವ ಬಿಟ್ಟು ನಡೆವುದೇ ಜೀವನತತ್ವ; ಒಪ್ಪಿಕೊಳ್ಳದವ ಬದುಕು ಅಪ್ಪಿಕೊಳ್ಳಲಾರ.

–ಮನೋಹರ ಮಳಗಾಂವಕರ್

★ ನಾಡಿನ ತುಂಬಾ ನೂರು ಜಗದ್ಗುರು, ಇರುವುದು ಜಗವೊಂದೇ; ಕಾಡಿನ ತುಂಬಾ ಬಣ್ಣದ ಹೂಗಳು, ವಾಸನೆ ಕೆಲವೊಂದೇ.

–ಚೆನ್ನವೀರ ಕಣವಿ

★ ಹಸಿದವರಿಗೆ ನಮ್ಮಿಂದ ಊಟಕ್ಕೆ ಹಾಕುವುದಾಗದಿರುವಾಗ, ಊಟಕ್ಕೆ ಹಾಕುವವರ ಮನೆಯನ್ನಾದರೂ ತೋರಿಸಬೇಕು.

–ಗಳಗನಾಥ

★ ಶೋಷಿತ ವರ್ಗಗಳಲ್ಲಿ ಆತ್ಮವಿಶ್ವಾಸ ಮೂಡಿಸಲು ವಿದ್ಯೆ ಮತ್ತು ಸ್ವಾವಲಂಬನೆ ಅತ್ಯಗತ್ಯ.

–ಬಿ.ಆರ್.ಅಂಬೇಡ್ಕರ್

★ ಮನುಷ್ಯನ ಮನಸ್ಸು ಊರ್ಧ್ವಮುಖಿ. ಇದಕ್ಕೆ ಮೊದಲನೆ ಸಾಕ್ಷಿ ಚರಿತ್ರೆ, ಎರಡನೆಯ ಸಾಕ್ಷಿ ಕಲೆ. ಒಂದು ಬಹಿರ್ಮುಖದ ಸಾಹಸವಾದರೆ, ಮತ್ತೊಂದು ಅಂತರ್ಮುಖದ ಸಾಹಸ.

–ಕುವೆಂಪು

★ ಒಂದು ಕಾಲು ಕೆಸರು ತುಳಿಯಿತು. ಹಾಗೆಂದು ಆ ಕಾಲನ್ನು ತೊಳೆಯಬೇಕೇ ಹೊರತು, ಮತ್ತೊಂದು ಕಾಲನ್ನೂ ಆ ಕೆಸರು ತೆಗೆಯಲು ಬಳಸಿದರೆ, ಎರಡೂ ಕಾಲು ಕೊಚ್ಚೆಯಾಗುತ್ತದೆ ಅಲ್ಲದೆ ಇದ್ದ ಒಂದು ಕಾಲಿನ ಕೆಸರು ಹೋಗುವುದಿಲ್ಲ.

–ತ.ರಾ.ಸು.

★ ಕಲಾವಿದನ ಸನ್ಮಾನ ವ್ಯಕ್ತಿ ಪೂಜೆಯಲ್ಲ, ಅದು ಗುಣದ ಪೂಜೆ.

–ಕೆರೆಮನೆ ಶಿವರಾಮ ಹೆಗಡೆ

★ ಕುದುರೆ ಹಿಂದಿರಬೇಡ, ಅರಮನೆ ಮುಂದಿರಬೇಡ.

–ಗಾದೆ

★ ನಾಟಕದ ವಸ್ತು ಯಾವ ಯುಗಕ್ಕೆ ಸೇರಿದ್ದರೂ ಅದು ಆಯಾ (ಎಲ್ಲಾ) ಕಾಲದ ಸಮಾಜದ ಪ್ರತೀಕ. ಆದ್ದರಿಂದಲೇ ರಾಮಾಯಣವೂ ಒಂದು ಸಾಮಾಜಿಕ ನಾಟಕ.

–ಅ.ನ.ಕೃ.